ಸಮರ್ಥನೆಯಾಗಿ ಅವರು ಬಳಸಿಕೊಳ್ಳುವುದೂ ನಮ್ಮ ಪುರಾಣಕಾವ್ಯಗಳಿಂದಲೇ.

'ಈ ಅಂತರಾತ್ಮನ ಪ್ರೇರಣೆ ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲಿಯೂ ಒಂದೇ ರೀತಿಯಲ್ಲ. ಶಂಬೂಕನಿಗೆ ತಪಸ್ಸು ಮಾಡಲು ಪ್ರೇರೇಪಿಸುವ ಅಂತರಾತ್ಮ, ಆ ಅಪರಾಧಕ್ಕಾಗಿಯೇ ಅವನ ಶಿರಚ್ಛೇದ ಮಾಡಲು ರಾಮನನ್ನು ಪ್ರೇರೇಪಿಸುತ್ತದೆ! ಕ್ರೌಂಚಪಕ್ಷಿಯನ್ನು ಕೊಲ್ಲುವುದು ವ್ಯಾಧನ ಅಂತರಾತ್ಮನಿಗೆ ಅಸಾಧ್ಯವಲ್ಲ. ಆದರೆ ಅದಕ್ಕಾಗಿಯೇ ಶಾಪ ಕೊಡುವ ಪ್ರೇರಣೆ ವಾಲ್ಮೀಕಿಯ ಅಂತರಾತ್ಮನದು. ವೈದಿಕ ಅಗ್ನಿಹೋತ್ರಿಗೆ ಅದೇ ಅಂತರಾತ್ಮ ಯಜ್ಞಪಶುವಿನ ಬಲಿ ಕೊಡಲು ಪ್ರೇರೇಪಿಸುತ್ತದೆ. ಇತರ ಪ್ರಾಣಿಗಳ ಬಗೆಗೆ ಅನುಕಂಪ ತೋರಿಸಲೂ ಪ್ರೇರೇಪಿಸುತ್ತದೆ!'

ಹೀಗೆ ಹಲವು ನಿದರ್ಶನಗಳೊಂದಿಗೆ ಅವರು ನಮ್ಮ ಆತ್ಮಸಾಕ್ಷಿ ಎನ್ನುವುದು ಭಗವತ್ ಪ್ರೇರಣೆ ಅಲ್ಲ. ಅಲೌಕಿಕ ಅಲ್ಲ. ಅತೀಂದ್ರಿಯ ಪ್ರೇರಣೆ ಎಂಬ ಅರ್ಥದಲ್ಲಿ ನಾವು ನಂಬಿಕೊಂಡು ಬಂದ ಆತ್ಮಸಾಕ್ಷಿ ಒಂದು ಸರ್ವಸಮ್ಮತ ಕಪೋಲಕಲ್ಪನೆ. ಅದೊಂದು ಕವಿಸಮಯ ಎಂಬ ನಿರ್ಧಾರಕ್ಕೆ ಬರುತ್ತಾರೆ.

ಇಷ್ಟಕ್ಕೇ ನಿಂತಿದ್ದರೆ, ಇದು ಸಿದ್ಧಗೊಂಡಿರುವ ಮಾದರಿಯೊಂದನ್ನು, ನಂಬಿಕೆಯೊಂದನ್ನು ಒಡೆದುಹಾಕುವ ಹುಂಬತನವಾಗಿಯಷ್ಟೇ ಉಳಿಯುತ್ತಿತ್ತು. ಆದರೆ ಗೌರೀಶರ ಕಾಳಜಿ ಅಷ್ಟು ಮಾತ್ರದ್ದಲ್ಲ. ಅವರು ಆತ್ಮಸಾಕ್ಷಿಗೆ ಇರುವ ದೈವೀಕ ಪ್ರಭಾವಳಿಯನ್ನು ನಿರಾಕರಿಸುತ್ತಾರೆಯೇ ವಿನಃ ಆತ್ಮಸಾಕ್ಷಿ ಎಂಬ ಪರಿಕಲ್ಪನೆಯ ಪ್ರಯೋಜನವನ್ನಲ್ಲ. ಆತ್ಮಸಾಕ್ಷಿ ಕೊನೆಗೂ ವ್ಯಕ್ತಿ ಸಾಪೇಕ್ಷ ಎನ್ನುತ್ತಲೇ ಅವರು ಅದು ಅಷ್ಟೇ ಪ್ರಯೋಜನದ್ದು ಎಂದೂ ಹೇಳುತ್ತಾರೆ.

ಈ ಲೇಖನ ಕೊನೆಗೊಳ್ಳುವುದು ಹೀಗೆ: ಸಾರಾಸಾರ ವಿಚಾರದಿಂದ ತರ್ಕಸಂಗತ ಆಲೋಚನೆಯಿಂದ ಮೂಡಿಬಂದ ನಿಶ್ಚಯಾತ್ಮಕ ಬುದ್ಧಿಯ ಆದೇಶವನ್ನು ನಮ್ಮ ಮನಸ್ಸು ಮೆಚ್ಚಬೇಕು. ಅಂಥ ಶಿಸ್ತು ಮನಸ್ಸಿಗೆ ಹಚ್ಚಬೇಕು. ಅಂದಾಗ ನಮ್ಮ ಸಂಕಲ್ಪಕ್ಕೆ ಈ ಆತ್ಮಸಾಕ್ಷಿಯ ಪರಿಕಲ್ಪನೆಯೂ ಪೋಷಕವಾಗಬಲ್ಲದು. ಇಂಥ ಸಂಸ್ಕಾರಬಲದಿಂದಲೇ ನಿಜವಾದ 'ಮನಃಪೂತ ಸಮಾಚರಣ' ಸಾಧ್ಯವಾಗುತ್ತದೆ. ಸಾರ್ಥಕವಾಗುತ್ತದೆ. ಇಲ್ಲವಾದರೆ ಹೆಚ್ಚಾಗಿ ನಮ್ಮ ಆತ್ಮಸಾಕ್ಷಿಯ ದಾಖಲೆ ಕೋರ್ಟಿನಲ್ಲಿ ದೇವರಾಣೆ ಮಾಡಿ ಹೇಳಿದ ಸಾಕ್ಷಿಯಂತೆ – ಪರವಂಚನೆಗೂ ಆತ್ಮವಂಚನೆಗೂ ಒಂದು ಸಂಭಾವಿತ ಸಮರ್ಥನೆ ಆಗುತ್ತದೆ.

ಇದು ಗೌರೀಶ ಕಾಯ್ಕಿಣಿ ಅವರ ಒಟ್ಟಾರೆ ಜೀವನದೃಷ್ಟಿಗೆ, ಅವರ ಗ್ರಹಿಕೆಯ ಕ್ರಮಕ್ಕೆ ಒಂದು ನಿದರ್ಶನ. ಪಾಪ–ಪುಣ್ಯ, ಋಣಾನುಬಂಧ, ಧರ್ಮಸಂಕಟ, ನೀತಿ, ಸಂಸ್ಕೃತಿ, ಕರ್ಮ ಫಲ, ಯಶಸ್ಸು ಶ್ರೇಯಸ್ಸು, ಗುಣ ಮತ್ತು ದೋಷ, ಮೂಢನಂಬಿಕೆ, ಹುತಾತ್ಮತೆ, ಸಂವೇದನೆ, ಬ್ರಾಹ್ಮಣೀಕರಣ, ವರ್ಣ ಮತ್ತು ಜಾತಿ, ಪಕ್ಷಪಾತ, ಹೀಗೆ ಸಮಾಜದಲ್ಲಿ ಬಹುಜನಪ್ರಿಯವಾದ, ಕ್ಲೀಷೆಯ ಹಂತಕ್ಕೆ ತಲುಪಿರುವ, ಆದರೆ ನಮ್ಮ ಬದುಕಿನ ಬಹುತೇಕ ಸಂದರ್ಭಗಳಲ್ಲಿ ನಿರ್ಣಾಯಕ ಅಂಶಗಳಾಗಿರುವ ಹಲವು ಮೌಲ್ಯ, ನಂಬಿಕೆಗಳನ್ನು ಅವರು ತೀವ್ರವಾಗಿ ಪರೀಕ್ಷೆಗೆ ಒಳಪಡಿಸುತ್ತಾರೆ. ಅವುಗಳ ಪದಮೂಲ, ಅರ್ಥಮೂಲಗಳಿಗೆ ಹೋಗಿ ನಿಜಾರ್ಥವನ್ನು ಬಗೆದು ತೋರಿಸುತ್ತಾರೆ. ಇರುವುದನ್ನು ಕಣ್ಣುಮುಚ್ಚಿಕೊಂಡು ಒಪ್ಪಿಕೊಳ್ಳುವುದನ್ನು ಬಿಟ್ಟು ರಿಸ್ಕ್ ತೆಗೆದುಕೊಂಡು ಅವುಗಳನ್ನು ಉಜ್ಜಿ ಪರೀಕ್ಷಿಸಿ ನೋಡಿ ಇಂದಿನ ಬದುಕಿಗೆ ಪ್ರಯೋಜನಕಾರಿಯಾಗಿ, ನಮ್ಮ ಬದುಕಿನ ಘನತೆಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಪ್ರಚೋದನಕಾರಿಯಾಗಿ ಬಳಸಿಕೊಳ್ಳುವಂತೆ ಒತ್ತಾಯಿಸುತ್ತಾರೆ.

ತಮ್ಮನ್ನು ತಾವು ಪರಮ 'ನಾಸ್ತಿಕ' ಎಂದು ಹೇಳಿಕೊಂಡಿರುವ ಗೌರೀಶ ಕಾಯ್ಕಿಣಿ, ಈ ಪುಸ್ತಕದುದ್ದಕ್ಕೂ ಬರೆದಿರುವ ಬಹುತೇಕ ಲೇಖನಗಳು ಆಸ್ತಿಕಪ್ರಣೀತ ನಂಬಿಕೆಗಳ, ಪರಿಕಲ್ಪನೆಗಳ ಕುರಿತಾಗಿಯೇ ಇವೆ ಎನ್ನುವುದು ವಿಶೇಷ. ಯಾವುದನ್ನೂ ಪ್ರಶ್ನಿಸದೇ, ಪರೀಕ್ಷಿಸದೆ ಒಪ್ಪಿಕೊಳ್ಳಲಾರೆ ಎಂಬ ಎಚ್ಚರ ಅವರ ಬರಹದುದ್ದಕ್ಕೂ ಕಾಣಿಸಿಕೊಳ್ಳುವ ಒಂದು ಗುಣ. ಮೊದಲ ಸಂಪುಟದ ಎರಡನೇ ಭಾಗ 'ಜಿಜ್ಞಾಸೆ'. ಇದರಲ್ಲಿ ಸುದೀರ್ಘವಾದ ಸಂಶೋಧನಾತ್ಮಕ, ಸಂವಾದಾತ್ಮಕ ಲೇಖನಗಳಿವೆ. 'ವಾಲ್ಮೀಕಿ ತೂಕಡಿಸಿದಾಗ' ಎಂಬ ಅವರ ಲೇಖನ ಸಾಕಷ್ಟು ಚರ್ಚೆಯನ್ನು ಹುಟ್ಟುಹಾಕಿತ್ತು. ತಮ್ಮ ಲೇಖನದ ಬಗ್ಗೆ ಎದ್ದ ತಕರಾರುಗಳಿಗೆ ಉತ್ತರಿಸುವ ಉದ್ದೇಶದಿಂದ ಗೌರೀಶರು ಮತ್ತೊಂದು ಲೇಖನವನ್ನು